# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 866

ಸದಸ್ಯರ ಹೆಸರು : ಶ್ರೀ. ಪ್ರತಾಪ್ ಸಿಂಹ ನಾಯಕ್. ಕೆ. (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 19.08.2025

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ತೆಂಗು ಬೆಳೆಯನ್ನು ಕಾಡುತ್ತಿರುವ ಕಪ್ಪು ತಲೆ ಹುಳುವಿನ ಬಾಧೆಯಿಂದಾಗಿ ತೆಂಗಿನ ಮರಗಳು ಒಣಗಿ ಇಡೀ ತೋಟಗಳೇ ನಾಶವಾಗುತ್ತಿರುವುದರಿಂದ, ಬಹುವಾರ್ಷಿಕ ನಿರೀಕ್ಷಿತ ಆದಾಯವನ್ನು ಶಾಶ್ವತವಾಗಿ ಕಳೆದುಕೊಂಡು ತೆಂಗು ಬೆಳೆಗಾರರು ಅತೀವ ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಬಂದಿದ್ದಲ್ಲಿ, ರಾಜ್ಯದಲ್ಲಿ ತೆಂಗು ಬೆಳೆಯ ಒಟ್ಟು ವಿಸ್ತೀರ್ಣವೆಷ್ಟು ಮತ್ತು ಸದರಿ ಬೆಳೆ ವಿಸ್ತೀರ್ಣದಲ್ಲಿದ್ದ ತೆಂಗಿನ ಮರಗಳ ಸಂಖ್ಯೆ ಎಷ್ಟು; ಸದರಿ ಬೆಳೆ ವಿಸ್ತೀರ್ಣದಲ್ಲಿ ಕಪ್ಪು ತಲೆ ಹುಳುವಿನ ಬಾಧೆಯಿಂದಾಗಿ ಇದುವರೆಗೆ ಎಷ್ಟು ತೆಂಗಿನ ಮರಗಳು ಒಣಗಿ ನಾಶವಾಗಿವೆ; ರೈತರಿಗೆ ಇದರಿಂದಾಗಿ ಆಗಿರುವ ನಷ್ಟದ ವಿವರಗಳೇನು; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ತೆಂಗು ಬೆಳೆಯ ವಿಸ್ತೀರ್ಣ 5.65 ಲಕ್ಷ ಹೆಕ್ಟೇರ್ ಗಳಿದ್ದು, ಸದರಿ ವಿಸ್ತೀರ್ಣದಲ್ಲಿ 564.62 ಲಕ್ಷ ತೆಂಗಿನ ಮರಗಳನ್ನು ಅಂದಾಜಿಸಲಾಗಿರುತ್ತದೆ.<br><br>ಈ ವಿಸ್ತೀರ್ಣದಲ್ಲಿ ಕಪ್ಪು ತಲೆ ಹುಳುವಿನ ಬಾಧೆಯಿಂದಾಗಿ 62,044 ಹೆಕ್ಟೇರ್ ವಿಸ್ತೀರ್ಣ ಹಾನಿಗೊಳಗಾಗಿರುವುದಾಗಿ ಅಂದಾಜಿಸಲಾಗಿದೆ.<br><br>ತೆಂಗಿನ ಮರಗಳು ಒಣಗಿ ನಾಶವಾಗಿರುವುದು ಕಂಡುಬಂದಿರುವುದಿಲ್ಲ. ಹವಾಮಾನದಲ್ಲಿ ಅಧಿಕ ಉಷ್ಣಾಂಶ ಹಾಗೂ ಒಣ ಹವೆಯಿಂದ ಕಪ್ಪು ತಲೆ ಹುಳು ಉಲ್ಬಣಗೊಂಡು ಬಾಧೆ ಹೆಚ್ಚಾಗುತ್ತದೆ. ಹುಳುಗಳು ಎಲೆಯ ಕೆಳಗಿನ ಭಾಗಗಳಲ್ಲಿ ಪತ್ರಹರಿತ್ತನ್ನು (ಹಸಿರು) ಕೆರೆದು ತಿನ್ನುತ್ತವೆ, ನಂತರ ಗರಿಗಳು ಸುಟ್ಟ ಬಣ್ಣಕ್ಕೆ ತಿರುಗಿ ಒಣಗುತ್ತವೆ, ಇದರಿಂದ ತೆಂಗಿನ ಇಳುವರಿ ಕುಂಠಿತವಾಗುತ್ತದೆ. ತಾಲ್ಲೂಕುವಾರು ವಿವರ ಅನುಬಂಧದಲ್ಲಿ ಒದಗಿಸಲಾಗಿದೆ. |
| ಇ) | ತೆಂಗು ಬೆಳೆಯನ್ನು ಕಾಡುತ್ತಿರುವ ಕಪ್ಪು ತಲೆ ಹುಳುವಿನ ಬಾಧೆಯಿಂದಾಗಿ ತೆಂಗಿನ ಮರಗಳು ಒಣಗಿ ಇಡೀ ತೋಟಗಳೇ ನಾಶವಾಗುತ್ತಿರುವುದರಿಂದ, ತೆಂಗು ಉಳಿಸಲು ಇದುವರೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಇಲಾಖೆಯಿಂದ ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ:<br><br>1. ತೆಂಗಿನ ತೋಟಗಳ ಪುನ:ಶ್ಚೇತನ, ಮರುನಾಟಿ ಮತ್ತು ನಿರ್ವಹಣೆ ಕಾರ್ಯಕ್ರಮ- |

| | | |
|---|---|---|
| | | ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ತೆಂಗಿನ ತೋಟಗಳ ಪುನ:ಶ್ಚೇತನ, ಮರುನಾಟಿ ಮತ್ತು ನಿರ್ವಹಣೆಗಾಗಿ ಪ್ರತಿ ಫಲಾನುಭವಿಗೆ ಒಂದು ಹೆಕ್ಟೇರ್ ವರೆಗೆ ರೂ. 54,000/- ಗಳನ್ನು ನೀಡಲಾಗುತ್ತಿದೆ. ಮೊದಲನೇ ವರ್ಷ ರೂ.45,250/- ಗಳನ್ನು ಹಾಗೂ ಎರಡನೇ ವರ್ಷದ ನಿರ್ವಹಣೆಗೆ ರೂ.8,750/ ಗಳ ಸಹಾಯಧನವನ್ನು ನೀಡಲಾಗುತ್ತಿದೆ. 2023-24 ನೇ ಸಾಲಿನಲ್ಲಿ 2,423.50 ಹೆಕ್ಟೇರ್‌ಗಳಿಗೆ ಮೊದಲನೇ ವರ್ಷದ ಕಾರ್ಯಕ್ರಮಕ್ಕಾಗಿ ರೂ. 951.19 ಲಕ್ಷಗಳ ಸಹಾಯಧನ ಒದಗಿಸಲಾಗಿದೆ. ಈ ಪ್ರದೇಶದ ಎರಡನೇ ವರ್ಷದ ನಿರ್ವಹಣೆಗಾಗಿ 2024-25ನೇ ಸಾಲಿನಲ್ಲಿ ಆರ್ಥಿಕ ವರ್ಷದ ಅಂತ್ಯಕ್ಕೆ ಅನುದಾನ ಬಿಡುಗಡೆಯಾಗಿದ್ದರಿಂದ ಸದರಿ ಅನುದಾನವನ್ನು ಪ್ರಸಕ್ತ ಸಾಲಿನಲ್ಲಿ ರೂ.186.04 ಲಕ್ಷಗಳನ್ನು ವಿನಿಯೋಗಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. 2025-26ನೇ ಸಾಲಿನಲ್ಲಿ ಹೊಸದಾಗಿ ಮೊದಲನೆ ವರ್ಷದ ಕಾರ್ಯಕ್ರಮಕ್ಕಾಗಿ 1,000 ಹೆಕ್ಟೇರ್ ವಿಸ್ತೀರ್ಣದಲ್ಲಿ ಅನುಷ್ಠಾನಗೊಳಿಸಲು ರೂ.452.50 ಲಕ್ಷಗಳ ಅನುದಾನ ನಿಗದಿಯಾಗಿದ್ದು, ಅನುಷ್ಠಾನ ಪ್ರಗತಿಯಲ್ಲಿದೆ.<br><br>2. ರೈತರ ತಾಕುಗಳಲ್ಲಿ ಪ್ರಾತ್ಯಕ್ಷತೆ ಹಾಗೂ ನಿರ್ವಹಣೆ ಕಾರ್ಯಕ್ರಮ-<br>ರೈತರ ತಾಕುಗಳಲ್ಲಿ ಪ್ರಾತ್ಯಕ್ಷತೆ ಹಾಗೂ ನಿರ್ವಹಣೆಗಾಗಿ ಒಂದು ಹೆಕ್ಟೇರ್ ಗೆ ರೂ. 35,000/- ಗಳನ್ನು 2 ವರ್ಷಗಳ ಅವಧಿಗೆ, ಮೊದಲನೇ ವರ್ಷ ರೂ.17,500/- ಮತ್ತು ಎರಡನೇ ವರ್ಷದಲ್ಲಿ ರೂ.17,500/- ಗಳಂತೆ ಸಹಾಯಧನ ನೀಡಲಾಗುತ್ತಿದೆ. ರೋಗ ಮತ್ತು ಕೀಟಬಾಧಿತ ತಾಕುಗಳನ್ನು ಗುಚ್ಛಗಳಲ್ಲಿ (Clusters) ಆಯ್ಕೆ ಮಾಡಿ ಸಹಾಯಧನ ನೀಡಲಾಗಿರುತ್ತದೆ. 2023-24 ನೇ ಸಾಲಿನಲ್ಲಿ ಈ ಕಾರ್ಯಕ್ರಮದಡಿ ರೂ. 5,000 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, 28,420 ಹೆಕ್ಟೇರ್ |

ಗಳಲ್ಲಿ 41,185 ಫಲಾನುಭವಿಗಳಿಗೆ ಸಹಾಯಧನ ಒದಗಿಸಲಾಗಿದೆ. 2024-25ನೇ ಸಾಲಿನ ಆರ್ಥಿಕ ವರ್ಷದ ಅಂತ್ಯಕ್ಕೆ ರೂ.4,973.45 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದರಿಂದ ಪ್ರಸಕ್ತ ಸಾಲಿನಲ್ಲಿ ಎರಡನೇ ವರ್ಷದ ನಿರ್ವಹಣೆಗಾಗಿ ವಿನಿಯೋಗಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

3. ಕಪ್ಪು ತಲೆ ಹುಳು ಹಾಗೂ ಬಿಳಿನೊಣ ಕೀಟಗಳ ನಿಯಂತ್ರಣಕ್ಕಾಗಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 23 ಪ್ರಯೋಗ ಶಾಲೆಗಳಲ್ಲಿ ಗೋನಿಯೋಜಸ್ ಎಂಬ ಪರೋಪಜೀವಿಗಳು ಹಾಗೂ ಐಸಿರಿಯಾ ಜೈವಿಕ ಶಿಲೀಂದ್ರ ನಾಶಕವನ್ನು ಉತ್ಪಾದನೆ ಮಾಡಿ ಉಚಿತವಾಗಿ ವಿತರಿಸಲಾಗುತ್ತಿದೆ. 2024-25 ನೇ ಸಾಲಿನಲ್ಲಿ ರೂ. 140.00 ಲಕ್ಷಗಳ ಅನುದಾನಕ್ಕೆ 328.44 ಲಕ್ಷ ಸಂಖ್ಯೆಯ ಪರೋಪ ಜೀವಿಗಳನ್ನು ಉತ್ಪಾದಿಸಿ 6,969 ಫಲಾನುಭವಿಗಳಿಗೆ ವಿತರಿಸಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ರೂ. 140.00 ಲಕ್ಷಗಳ ಅನುದಾನ ನಿಗದಿಯಾಗಿದ್ದು, ಪರೋಪ ಜೀವಿಗಳನ್ನು ಹಾಗೂ ಐಸಿರಿಯಾ ಜೈವಿಕ ಶಿಲೀಂದ್ರ ನಾಶಕವನ್ನು ಉತ್ಪಾದಿಸಿ ಉಚಿತವಾಗಿ ವಿತರಿಸಲಾಗುತ್ತಿದೆ.

4. ಕಪ್ಪು ತಲೆ ಹುಳುವಿನ ನಿಯಂತ್ರಣಕ್ಕಾಗಿ ಇಲಾಖಾ ಪ್ರಯೋಗಶಾಲೆಗಳಲ್ಲಿ ಗೋನಿಯೋಜಸ್ ಪರೋಪ ಜೀವಿಗಳ ಉತ್ಪಾದನೆ ಮಾಡಿ ಉಚಿತವಾಗಿ ವಿತರಿಸಲು ರೂ.50.00 ಲಕ್ಷಗಳ ಹೆಚ್ಚುವರಿ ಅನುದಾನ ನೀಡುವಂತೆ ಕೇಂದ್ರೀಯ ತೆಂಗು ಅಭಿವೃದ್ಧಿ ಮಂಡಳಿ, ಕೊಚ್ಚಿ, ಕೇರಳ ರವರಿಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

5. ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ ತೆಂಗು ಸೇರಿದಂತೆ ವಿವಿಧ ತೋಟಗಾರಿಕಾ ಬೆಳೆಗಳಿಗೆ ಸಸ್ಯ ಸಂರಕ್ಷಣಾ ಔಷಧಿಗಳ ಖರೀದಿಗಾಗಿ ಪ್ರತಿ ಹೆಕ್ಟೇರಿಗೆ ತಗಲುವ ಘಟಕ ವೆಚ್ಚ ರೂ. 10,000/-ಗಳಲ್ಲಿ ಶೇ.75ರಂತೆ ಸಾಮಾನ್ಯ ವರ್ಗದ ರೈತರಿಗೆ ರೂ.7,500ಗಳನ್ನು ಹಾಗೂ

| | | |
|---|---|---|
| | | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರಿಗೆ ಶೇ.90ರಂತೆ ರೂ.9,000/- ಗಳ ಸಹಾಯಧನ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು 340.00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದ್ದು, ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.<br><br>6. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ತೆಂಗು ಬೆಳೆ ಸೇರಿದಂತೆ ತೋಟಗಾರಿಕೆ ಬೆಳೆಗಳ ಸಮಗ್ರ ರೋಗ/ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆಗಾಗಿ ರೂ.5,000/- ಪ್ರತಿ ಹೆಕ್ಟೇರ್ ಘಟಕ ವೆಚ್ಚದ ಶೇ.30ರಂತೆ ಪ್ರತಿ ಹೆಕ್ಟೇರಿಗೆ ರೂ.1,500 ರಂತೆ 2 ಹೆಕ್ಟೇರ್ ರವರೆಗೆ ರೂ.3,000/-ಗಳ ಸಹಾಯಧನ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು 525.00 ಲಕ್ಷಗಳ ಅನುದಾನ ನಿಗದಿಪಡಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.<br><br>7. ತೆಂಗು ಶೇಖರಣ ಘಟಕಗಳನ್ನು ನಿರ್ಮಿಸಲು ಸಹಾಯಧನಕ್ಕಾಗಿ ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆಯಡಿಯಲ್ಲಿ 245 ಘಟಕಗಳ ಭೌತಿಕ ಗುರಿ ಇದ್ದು ರೂ.2.14 ಕೋಟಿಗಳ ಆರ್ಥಿಕ ಗುರಿ ನಿಗಧಿಪಡಿಸಿದ್ದು, ಈ ಕಾರ್ಯಕ್ರಮ ಅನುಷ್ಠಾನವು ಪ್ರಗತಿಯಲ್ಲಿರುತ್ತದೆ. ಪ್ರತಿ ಘಟಕದ ವೆಚ್ಚ ರೂ.87,500/-ಗಳಾಗಿರುತ್ತದೆ.<br><br>8. ದಿನಾಂಕ : 31.07.2025 ಹಾಗೂ 01.08.2025 ರಂದು ತಜ್ಞರು, Central Plantation Crops Research Institute (CPCRI) ಕಾಸರಗೋಡು, ತೋಟಗಾರಿಕೆ ವಿಶ್ವ ವಿದ್ಯಾನಿಲಯ ತಜ್ಞರು, CDB ಅಧಿಕಾರಿಗಳು ಹಾಗೂ ಇಲಾಖಾ ಅಧಿಕಾರಿಗಳಿಂದ ತೆಂಗು ಬೆಳೆಯಲ್ಲಿ ಕಂಡು ಬರುವ ರೋಗ / ಕೀಟಗಳಿಗೆ ಹಾನಿಗೊಳಗಾದ ತುಮಕೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಇಳುವರಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿರುವುದರ ಕುರಿತು ರೈತರ ತಾಕುಗಳಲ್ಲಿ ಅರಿವು ಮೂಡಿಸಲು ಪ್ರಾತ್ಯಕ್ಷತೆ / ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಲಾಗುತ್ತಿದೆ. |

| | | |
|---|---|---|
| | | 9. ತೆಂಗಿನ ಬೆಳೆಯಲ್ಲಿ ಕಂಡು ಬರುವ ರೋಗ/ಕೀಟಗಳ ಹತೋಟಿ ಕ್ರಮಗಳ ಕುರಿತು ಅರಿವು ಮೂಡಿಸಲು ವಿಷಯ ತಜ್ಞರು, ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ತಜ್ಞರು, ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ (CPCRI), ಕಾಸರಗೋಡು ಹಾಗೂ ತೆಂಗು ಅಭಿವೃದ್ಧಿ ಮಂಡಳಿಯ ಅಧಿಕಾರಿಗಳ ಸಹಯೋಗದೊಂದಿಗೆ 12,500 ರೈತರಿಗೆ 85 ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿರುತ್ತದೆ. |
| ಈ) | ತೆಂಗು ಬೆಳೆಯನ್ನು ಕಾಡುತ್ತಿರುವ ಕಪ್ಪು ತಲೆ ಹುಳುವಿನ ಬಾಧೆಯಿಂದಾಗಿ, ಬಹುವಾರ್ಷಿಕವಾಗಿ ದೊರೆಯುತ್ತಿದ್ದ ಬೆಳೆ ಉತ್ಪನ್ನವನ್ನು ಶಾಶ್ವತವಾಗಿ ಕಳೆದುಕೊಂಡು ಆರ್ಥಿಕವಾಗಿ ಅತ್ಯಂತ ದೊಡ್ಡ ಮಟ್ಟದಲ್ಲಿ ನಷ್ಟಕ್ಕೊಳಗಾಗಿರುವ ತೆಂಗು ಬೆಳೆಗಾರರಿಗೆ ಸರ್ಕಾರ ಇದುವರೆಗೆ ನೀಡಿರುವ ಪರಿಹಾರದ ವಿವರಗಳೇನು? (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು) | ತೋಟಗಾರಿಕೆ ಇಲಾಖೆಯಲ್ಲಿ ಪರಿಹಾರ ವಿತರಿಸುವ ಕಾರ್ಯಕ್ರಮ ಇರುವುದಿಲ್ಲ. ಈ ಮೇಲಿನ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ತೆಂಗು ಬೆಳೆಗಾರರಿಗೆ ಸಹಾಯಧನ ನೀಡಲಾಗುತ್ತಿದೆ. |

ಸಂಖ್ಯೆ: HORTI 365 HGM 2025

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

LCQ : 866

**ಅನುಬಂಧ**

**ತೆಂಗಿನಲ್ಲಿ ಕಪ್ಪುತಲೆ ಹುಳುವಿನ ಬಾಧೆಗೊಳಗಾದ ತಾಲ್ಲೂಕವಾರು ವಿವರ**

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ತೆಂಗು ಬೆಳೆಯ ವಿಸ್ತೀರ್ಣ (ಹೆ. ಗಳಲ್ಲಿ) | ತೆಂಗಿನ ಮರಗಳ ಸಂಖ್ಯೆ | ಕಪ್ಪುತಲೆ ಹುಳುವಿನಿಂದ ಬಾಧಿತ ಮರಗಳ ಸಂಖ್ಯೆ |
|---|---|---|---|---|---|
| 1 | ಚಿಕ್ಕಮಗಳೂರು | ಅಜ್ಜಂಪುರ | 5651 | 565100 | 207000 |
| | | ತರೀಕೆರೆ | 2884.3 | 288430 | 0 |
| | | ಚಿಕ್ಕಮಗಳೂರು | 35695 | 3569500 | 990000 |
| | | ಕಡೂರು | 3838 | 383800 | 15000 |
| | **ಒಟ್ಟು** | | **48068.3** | **4806830** | **1212000** |
| 2 | ತುಮಕೂರು | ತುಮಕೂರು | 14030.15 | 1403015 | 10600 |
| | | ಚಿಕ್ಕನಾಯಕನ ಹಳ್ಳಿ | 32720.16 | 3272016 | 85000 |
| | | ಗುಬ್ಬಿ | 34299.01 | 3429901 | 120000 |
| | | ಕೊರಟಗೆರೆ | 1991.22 | 199122 | 5000 |
| | | ಕುಣಿಗಲ್ | 12321.38 | 1232138 | 75000 |
| | | ಶಿರಾ | 10131.63 | 1013163 | 34500 |
| | | ತಿಪಟೂರು | 31272.15 | 3127215 | 45000 |
| | | ತುರುವೇಕೆರೆ | 37525.73 | 3752573 | 210000 |
| | | ಮಧುಗಿರಿ | 1280.21 | 128021 | 0 |
| | | ಪಾವಗಡ | 868.06 | 86806 | 0 |
| | ಒಟ್ಟು | | **176439.7** | **17643970** | **585100** |
| 3 | ಮಂಡ್ಯ | ಕೆ.ಆರ್. ಪೇಟೆ | 22276 | 2227600 | 120000 |
| | | ಮದ್ದೂರು | 9672 | 967200 | 336900 |
| | | ಮಳವಳ್ಳಿ | 3072 | 307200 | 50000 |
| | | ಮಂಡ್ಯ | 3890 | 389000 | 15400 |
| | | ನಾಗಮಂಗಲ | 29156 | 2915600 | 4000 |
| | | ಪಾಂಡವಪುರ | 3972 | 397200 | 42500 |
| | | ಶ್ರೀರಂಗಪಟ್ಟಣ | 2693 | 269300 | 20000 |
| | ಒಟ್ಟು | | **74731** | **7473100** | **588800** |
| 4 | ಹಾಸನ | ಆಲೂರು | 368.54 | 36854 | 0 |
| | | ಅರಕಲಗೂಡು | 2987 | 298700 | 0 |
| | | ಅರಸೀಕೆರೆ | 56473.32 | 5647332 | 800000 |
| | | ಬೇಲೂರು | 4032.29 | 403229 | 0 |
| | | ಚನ್ನರಾಯಪಟ್ಟಣ | 40710.78 | 4071078 | 191000 |
| | | ಹಾಸನ | 10721.41 | 1072141 | 56580 |
| | | ಹೊಳೆನರಸೀಪುರ | 3405.85 | 340585 | 10300 |

| | | | | | |
|---|---|---|---|---|---|
| | | ರ | | | |
| | | ಸಕಲೇಶಪುರ | 92.81 | 9281 | 0 |
| | **ಒಟ್ಟು** | | **118792** | **11879200** | **1057880** |
| 5 | ದಾವಣಗೆರೆ | ದಾವಣಗೆರೆ | 2100.47 | 210047 | 123000 |
| | | ಚನ್ನಗಿರಿ | 2004.86 | 200486 | 1400 |
| | | ಹೊನ್ನಾಳಿ | 879.02 | 87902 | 2000 |
| | | ಜಗಳೂರು | 192.35 | 19235 | 1800 |
| | | ಹರಿಹರ | 1616.31 | 161631 | 93000 |
| | **ಒಟ್ಟು** | | **6793.01** | **679301** | **221200** |
| 6 | ಚಿತ್ರದುರ್ಗ | ಹೊಳಲ್ಕೆರೆ | 6544 | 654400 | 6500 |
| | | ಹೊಸದುರ್ಗ | 28150 | 2815000 | 9853 |
| | | ಹಿರಿಯೂರು | 9437 | 943700 | 3303 |
| | | ಚಳ್ಳಕೆರೆ | 680 | 68000 | 238 |
| | | ಚಿತ್ರದುರ್ಗ | 583 | 58300 | 204 |
| | | ಮೊಳಕಾಲ್ಮೂರು | 114 | 11400 | 40 |
| | **ಒಟ್ಟು** | | **45508** | **4550800** | **20138** |
| 7 | ಉತ್ತರ ಕನ್ನಡ | ಕಾರವಾರ | 816.78 | 73510 | 0 |
| | | ಅಂಕೋಲ | 953.92 | 85750 | 47 |
| | | ಕುಮಟ | 1798.68 | 179800 | 25 |
| | | ಹೊನ್ನಾವರ | 1312.49 | 196800 | 300 |
| | | ಭಟ್ಕಳ | 861.76 | 86176 | 50 |
| | | ಸಿದ್ದಾಪುರ | 283.05 | 30500 | 0 |
| | | ಶಿರಸಿ | 672.12 | 56832 | 0 |
| | | ಹಳಿಯಾಳ | 13.02 | 1300 | 100 |
| | | ಮುಂಡಗೋಡ | 38.32 | 5748 | 0 |
| | | ಯಲ್ಲಾಪುರ | 825.33 | 123750 | 0 |
| | | ಜೋಯಿಡಾ | 107.27 | 10727 | 0 |
| | **ಒಟ್ಟು** | | **7682.74** | **850893** | **522** |
| 8 | ಶಿವಮೊಗ್ಗ | ಶಿವಮೊಗ್ಗ | 2460.72 | 246000 | 20000 |
| | | ಭದ್ರಾವತಿ | 1225.23 | 122500 | 8000 |
| | | ಶಿಕಾರಿಪುರ | 236.68 | 23600 | 2000 |
| | | ಸೊರಬ | 476.37 | 47630 | 2500 |
| | | ಸಾಗರ | 495.76 | 49500 | 3000 |
| | | ಹೊಸನಗರ | 408.47 | 0 | 0 |
| | | ತೀರ್ಥಹಳ್ಳಿ | 338.7 | 0 | 0 |
| | **ಒಟ್ಟು** | | **5641.93** | **489230** | **35500** |
| 9 | ಮೈಸೂರು | ಹುಣಸೂರು | 4409 | 440900 | 12000 |
| | | ಮೈಸೂರು | 4843 | 484300 | 46000 |

| | | | | | |
|---|---|---|---|---|---|
| | | ಹೆಚ್. ಡಿ. ಕೋಟೆ | 2317 | 231700 | 3000 |
| | | ಕೆ.ಆರ್. ನಗರ | 1511 | 151100 | 7500 |
| | | ಸಾಲಿಗ್ರಾಮ | 2557 | 255700 | 3900 |
| | | ನಂಜನಗೂಡು | 3292 | 329200 | 111500 |
| | | ಪಿರಿಯಾಪಟ್ಟಣ | 797 | 79700 | 3500 |
| | | ಟೀ.ನರಸೀಪುರ | 628 | 62800 | 15600 |
| | | ಸರಗೂರು | 176 | 17600 | 500 |
| | **ಒಟ್ಟು** | | **20530** | **2053000** | **203500** |
| 10 | ಬೆಂಗಳೂರು ದಕ್ಷಿಣ (ರಾಮನಗರ) | ರಾಮನಗರ | 5248 | 524800 | 95200 |
| | | ಚನ್ನಪಟ್ಟಣ | 11978 | 1197800 | 127000 |
| | | ಮಾಗಡಿ | 4524 | 452400 | 200 |
| | | ಕನಕಪುರ | 6209 | 620900 | 120000 |
| | **ಒಟ್ಟು** | | **27959** | **2795900** | **342400** |